


ನಾನು ಸೀಗ್‌ಫ್ರೈಡ್ ಲೆಂಝ್ ಎಂಬ ಜರ್ಮನ್ ಲೇಖಕನ ಒಂದು ಕತೆಯನ್ನು ಓದಿ ಸುಮಾರು ವರ್ಷಗಳೇ ಆದವು. ಆ ಕತೆಯ ಹೆಸರು ನೆನಪಿಲ್ಲದಿದ್ದರೂ ಬೋಲೆರೂಪ್ ಎಂಬ ಊರಿನಲ್ಲಿ ನಡೆಯುವ ಅದರ ಕೆಲವು ಪ್ರಸಂಗಗಳನ್ನು ಮಾತ್ರ ಮರೆಯಲಾಗಿಲ್ಲ. ಬೋಲೆರೂಪ್ ನಮ್ಮ ಕುಮಟಾದಂಥ ಅಥವಾ ಮಲ್ಪೆಯಂಥ ಸಮುದ್ರ ತೀರದಲ್ಲಿದ್ದ ಒಂದು ಊರು. ಆ ಊರಿನ ಎರಡು ಕುಟುಂಬದವರು ಸುಮಾರು ಇನ್ನೂರು ವರ್ಷ ಪರಸ್ಪರ ಮಾತಾಡಿದ್ದಿಲ್ಲ. ಆದರೂ ಅವರು ಒಂದೇ ರೀತಿ ಬದುಕುತ್ತಿದ್ದರು. ಅವರ ಹೊಲಗದ್ದೆಗಳು ಅಕ್ಕಪಕ್ಕದಲ್ಲೇ ಇದ್ದವು. ಅವರ ಮಕ್ಕಳು ಒಂದೇ ಸ್ಕೂಲಿಗೆ ಹೋಗುತ್ತಿದ್ದರು. ಅವರು ಸತ್ತವರನ್ನು ಹೂಳುತ್ತಿದ್ದುದು ಒಂದೇ ಸ್ಮಶಾನದಲ್ಲಿ. ಇಬ್ಬರ ಮನೆತನಗಳ ಹೆಸರು ಕೂಡ ಒಂದೇ: ಫೆಡೆರ್ಸೆನ್ ಅಂತೇನೋ ಇದ್ದಿರಬೇಕು. ಅವರು ಯಾರು ಯಾರು ಎಂದು ನಿಮಗೆ ತಬ್ಬಿಬ್ಬಾಗದಿರಲಿ ಅಂತ ನಾವೀಗ ಒಂದು ಮನೆತನದವರನ್ನು ತೆಂಕಣ ಅಪ್ಪಣ್ಣ ಎಂದೂ ಇನ್ನೊಂದು ಮನೆತನದವರನ್ನು ಪಡುವಣ ಅಪ್ಪಣ್ಣ ಎಂದೂ ಕರೆಯೋಣ. ಅನಂತಮೂರ್ತಿಯವರ ಮೌನಿ ಕತೆಯಲ್ಲಿಯೂ ಒಬ್ಬ ಅಪ್ಪಣ್ಣಭಟ್ಟನಿದ್ದಾನೆ. ಅವನಿಗೂ ಈ ಕತೆಯ ಅಪ್ಪಣ್ಣನಿಗೂ ಯಾವುದೇ ಸಂಬಂಧವಿಲ್ಲ.

ಆ ಎರಡು ಕುಟುಂಬಗಳು ತಮ್ಮ ನಡುವೆ ಒಂದೇ ಒಂದು ಮಾತನ್ನು ಕೂಡ ಹಂಚಿಕೊಂಡಿರಲಿಲ್ಲ. ಯಾಕೆಂದರೆ ಒಂದು ಕುಟುಂಬದ ದೃಷ್ಟಿಯಲ್ಲಿ ಇನ್ನೊಂದು ಕುಟುಂಬದವರು ಕೊಳಕರೋ, ಗಬ್ಬೆದ್ದವರೋ, ಕಂತ್ರಿ ನಾಯಿಗಳೋ ಆಗಿದ್ದವರು. ಅವರು ಒಬ್ಬರನ್ನೊಬ್ಬರು ಕೊನೆಮೊದಲಿಲ್ಲದೆ ಸದಾ ನಿಂದಿಸುತ್ತ ಎಷ್ಟು ಗಾಢವಾಗಿ ದ್ವೇಷಿಸುತ್ತಿದ್ದರೆಂದರೆ, ಎರಡೂ ಕಡೆಯವರು ತಮ್ಮ ತಮ್ಮ ಹೆಸರುಗಳನ್ನು ಬದಲಾಯಿಸಿಕೊಳ್ಳಬೇಕೆಂದು ಬಹು ಹಿಂದೆಯೇ ತೀರ್ಮಾನಿಸಿಕೊಂಡಿದ್ದರು. ಆದರೂ ಯಾಕೆ ಬದಲಾಯಿಸಿಕೊಂಡಿರಲಿಲ್ಲವೆಂದರೆ, ಅವರು ಮೊದಲು ಬದಲಾಯಿಸಿಕೊಳ್ಳಲಿ ಎಂದು ಇವರೂ ಇವರು ಮೊದಲು ಬದಲಾಯಿಸಿಕೊಳ್ಳಲಿ ಎಂದು ಅವರೂ ಕಾದುಕೊಂಡಿದ್ದರು. ಹಾಗಾಗಿ, ಆ ಎರಡು ಕುಟುಂಬದವರಿಗೆ ಇನ್ನೂ ಅಪ್ಪಣ್ಣ ಎಂಬ ಹೆಸರೇ ಅಂಟಿಕೊಂಡಿತ್ತು. ಒಂದು ಕುಟುಂಬದ ಮಂದಿಗೆ ಇನ್ನೊಂದು ಕುಟುಂಬವೆಂದರೆ ಅಸಹ್ಯ, ಹೇಸಿಗೆ. ಆದ್ದರಿಂದ ಒಂದು ಕುಟುಂಬದವರು ಇನ್ನೊಂದು ಕುಟುಂಬದ ಮಂದಿಯನ್ನು ಹೆಸರಿಸಬೇಕಾದಾಗಲೆಲ್ಲ ತೋಳಗಳು, ಗುಳ್ಳೆನರಿಗಳು, ಕತ್ತೆಕಿರುಬಗಳು, ಹಾವುಗಳು, ಮುಂಗುಸಿಗಳು, ಕಪ್ಪೆಗಳು, ಚೇಳುಗಳು, ಜಿಗಣೆಗಳು, ಸೊಳ್ಳೆಗಳು ಎಂದು ಅನೇಕ ಜೀವಜಂತುಗಳ ಹೆಸರುಗಳನ್ನು ಉಪಯೋಗಿಸುತ್ತಿದ್ದರು. ಕೆಲವೊಮ್ಮೆ ಅವರಿಗೆ ಪರಸ್ಪರರನ್ನು ಹೀಗಳೆಯಬೇಕೆನ್ನಿಸಿದಾಗ ಎಂತೆಂಥ ಬೈಗುಳಗಳು ಹೊಳೆಯುತ್ತಿದ್ದವೆಂದರೆ, ಆ ಬೈಗುಳಗಳು ಚಿತ್ತಾಲರ ನಾಗಪ್ಪನ ಮನಸ್ಸಿನಲ್ಲಿ ಮೂಡುತ್ತಿದ್ದ ಒಂದೂ ಮಗ, ಎರಡೂ ಮಗ, ಹತ್ತೂ ಮಗದಂಥ ಸಭ್ಯ ಸೌಮ್ಯ ಬೈಗುಳಗಳಾಗಿರಲಿಲ್ಲ. ನಮ್ಮ ಕಾಲದಲ್ಲಿ ಫೇಸ್‌ಬುಕ್ಕಿನಂಥ ಜಾಗಗಳಲ್ಲಿ ಮಾತ್ರ ಕೆಲವರು ಯಾವ ಎಗ್ಗೂ ಇಲ್ಲದೆ ಬರೆಯುತ್ತಿರುವ ಆ ಬೈಗುಳಗಳನ್ನು ಯಾವ